**ಓ.ಎಸ್.ನಂ. 525/2020**

**ಪಿ.ಡಬ್ಲ್ಯು: 1**

ದಿನಾಂಕಃ 05-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಎಸ್ ಸಿ ಎನ್ 1 ನೇ ಪ್ರತಿವಾದಿ ಪರ ವಕೀಲರಿಂದಃ-**

ನಿಪಿ-9 ರಲ್ಲಿ ಬರೆದಿರುವ ಚೌಥರ್ಪುಗಳು ತಿಳಿದಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಪೂರ್ವ ಪಶ್ಚಿಮ ಸರಿ ಇದೆ, ಆದರೆ ಉತ್ತರಕ್ಕೆ ನಮ್ಮ ಸ್ವತ್ತು ಇದೆ ಮತ್ತು ದಕ್ಷಿಣಕ್ಕೆ ಪುರಸಭೆ ರಸ್ತೆ ಇದೆ ಎಂದು ನುಡಿಯುತ್ತಾರೆ. ಉತ್ತರಕ್ಕೆ ನಮ್ಮ ಸ್ವತ್ತು ಮತ್ತು ದಕ್ಷಿಣಕ್ಕೆ ಪುರಸಭೆ ರಸ್ತೆ ಎಂದು ವಿಭಾಗಪತ್ರದಲ್ಲಿ ನಮೂದು ಇರುವುದಿಲ್ಲ, ಆದರೆ ನಮ್ಮ ಮನೆಯ ಹಿಂದೆ ದನಗಳು ಮತ್ತು ಮೇವನ್ನು ಇಡಲು 50 ಅಡಿ ಜಾಗ ಖಾಲಿ ಬಿಟ್ಟಿದೆವು ಎಂದು ನುಡಿಯುತ್ತಾರೆ. ವಿಭಾಗಪತ್ರದಲ್ಲಿ ಪೂರ್ವ ಪಶ್ಚಿಮ 34 ಅಡಿ ಮತ್ತು ದಕ್ಷಿಣೋತ್ತರ 24 ಅಡಿ ಎಂದು ನಮೂದು ಇದೆ. ಸಾಕ್ಷಿ ಮುಂದುವರೆದು ಮನೆಯು 34 x 24 ವಿಸ್ತೀರ್ಣ ನಿರ್ಮಿಸಲಾಗಿತ್ತು ಮತ್ತು ಖಾಲಿ ಜಾಗದ ಬಗ್ಗೆ ನಮೂದು ಮಾಡಿರುವುದಿಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಈಗಲೂ ನಾವೇ ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ಖಾಲೀ ಜಾಗ ಹಸು ಮತ್ತು ಮೇವು ಇಡಲು ನಾವು ಉಪಯೋಗಿಸುತಿದ್ದ ಸ್ವತ್ತು ಎಂದು ನಮ್ಮ ವಾದಪತ್ರದಲ್ಲಿ ತಿಳಿಸಿರುವುದಿಲ್ಲ. 1 ನೇ ಪ್ರತಿವಾದಿಯೇ ವಿಭಾಗಪತ್ರದ ಸ್ವತ್ತಿನ ಉತ್ತರ ಭಾಗದಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 20 x 30 ಸ್ವತ್ತಿನಲ್ಲಿ ಪೂರ್ತಿ ಮನೆಕಟ್ಟಿಕೊಂಡು ವಾಸ ಇದ್ದಾರೆ. 1 ನೇ ಪ್ರತಿವಾದಿಯು 20 x 30 ಸ್ವತ್ತಿನಲ್ಲಿ ಕೇವಲ 20 x 20 ಕ್ಕೆ ಮನೆಕಟ್ಟಿ 20x 10 ಸ್ವತ್ತನ್ನು ಹಿತ್ತಲಾಗಿ ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹಿತ್ತಲಿನ ದಕ್ಷಿಣ ಭಾಗಕ್ಕೆ ಓಣಿ ಇತ್ತು ಎಂದರೆ ಸರಿಯಲ್ಲ.

ನಮ್ಮ ಸ್ವತ್ತಿನ ವಿಸ್ತೀರ್ಣ 34x 80 ಅಡಿ ಇದೆ. ಸಾಕ್ಷಿ ಮುಂದುವರೆದು ನಾವು ಮತ್ತು ದೊಡ್ಡಪ್ಪ- ಚಿಕ್ಕಪ್ಪನ ಮಕ್ಕಳು ವಿಭಾಗ ಮಾಡಿಕೊಂಡು 17x 80 ಇಬ್ಬರಿಗೂ ತಲಾ ಬಂದಿದೆ. 1 ನೇ ಪ್ರತಿವಾದಿಗೆ ಸೇರಿದ 10x 20 ಹಿತ್ತಲನ್ನು ನಾವು ಅಕ್ರಮವಾಗಿ ಒತ್ತುವರಿ ಮಾಡಿ ಮನೆ ನಿರ್ಮಿಸಿದ್ದೇವೆಂದರೆ ಸರಿಯಲ್ಲ. ಒತ್ತುವರಿ ಮಾಡಿ ಅಕ್ರಮವಾಗಿ ಕಟ್ಟಡ ಪರವಾನಗಿ ಪಡೆಯದೆ ಮನೆಕಟ್ಟಲಾಗಿದೆ ಎಂಬ ಪ್ರಶ್ನಗೆ ಸಾಕ್ಷಿಯು ನಾವು ಅರ್ಜಿ ನೀಡಿದೆವು, ಆದರೆ ಪರವಾನಗಿ ನೀಡಲಿಲ್ಲ ಮತ್ತು ಕೋವಿಡ್ ಇದ್ದುದ್ದರಿಂದ ಅಧಿಕಾರಿಗಳು ಮನೆ ಕಟ್ಟಲು ಮೌಖಿಕ ಅನುಮತಿ ನೀಡಿದ್ದರು ಎಂದು ನುಡಿಯುತ್ತಾರೆ. ನಾನು ಕಟ್ಟಡ ಪರವಾನಗಿಗೆ ಅರ್ಜಿ ನೀಡಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಕಟ್ಟಡ ಪರವಾನಗಿಗೆ ಅರ್ಜಿ ನಾನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅಕ್ರಮವಾಗಿ ಕಟ್ಟಡ ನಿರ್ಮಿಸಿದ್ದಕ್ಕೆ 1 ನೇ ಪ್ರತಿವಾದಿಯು ಪುರಸಭೆ, ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿಗೆ ದೂರು ನೀಡಿದರು ಎಂದರೆ ಸರಿಯಲ್ಲ. ಜಿಲ್ಲಾ ನಗರ ಕೋಶಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ನಾವು ಒತ್ತುವರಿ ಮಾಡಿ ಕಟ್ಟುತಿದ್ದೇವೆ ಆದ್ದರಿಂದ ಮನೆ ಕಟ್ಟಬಾರದು ಎಂದು ನಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ.

ಪುರಸಭೆಯ ಮುಖ್ಯಾಧಿಕಾರಿಗಳು ಬಂದು ನಮಗೆ ಮನೆ ಕಟ್ಟದಂತೆ ತಿಳಿಸಿದಾಗ ನಾವು ಅವರೊಂದಿಗೆ ಗಲಾಟೆ ಮಾಡಿದೆವು ಎಂದರೆ ಸರಿಯಲ್ಲ. ನಮಗೆ ಕೇವಲ 17 x 24 ಮಾತ್ರ ಖಾತೆ ಇದೆ ಎಂದರೆ ಸರಿಯಲ್ಲ. ಪುರಸಭಾ ಅಧಿಕಾರಿಗಳೊಂದಿಗೆ ಶಾಮಿಲಾಗಿ 17x 80 ಎಂದು ತಿದ್ದುಪಡಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ತಿದ್ದಿರುವುದನ್ನು ಗಮನಿಸಿದ ಅಧಿಕಾರಿಗಳು ಅದನ್ನು ಮತ್ತೆ 17 x 24 ಕ್ಕೆ ಮಾಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಂಡತಿ ನಮ್ಮ ವಿರುದ್ದ ದಾವೆ ಹೂಡಿದ್ದಾರೆ ಎಂದರೆ ಸರಿ. ನಾವು ಅಕ್ರಮವಾಗಿ ಮನೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಂಡತಿ ಘೋಷಣೆಗಾಗಿ ದಾವೆ ಹೂಡಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಸಂಬಂಧಿಸಿದ 10x 20 ಸ್ವತ್ತನ್ನುನಾವು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದೇವೆಂದರೆ ಸರಿಯಲ್ಲ. ಸದರಿ ವಿಚಾರ ತಿಳಿದಿದ್ದರು 1 ನೇ ಪ್ರತಿವಾದಿಗೆ ತೊಂದರೆ ನೀಡಲು ಉದ್ದೇಶ ಪೂರ್ವಕಾಗಿ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ನಮಗೆ 17 x 80 ಸ್ವತ್ತು ಬಂದಿಲ್ಲ ಎಂದರೆ ಸರಿಯಲ್ಲ. ನಾನು ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಇತರೆ ಅಧಿಕಾರಿಗೊಂಗೆ ಶಾಮಿಲಾಗಿ ಸುಳ್ಳು ದಾಖಲೆ ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ನಮ್ಮ ಸ್ವಾಧೀನದಲ್ಲಿ ಇರುವ 10 x 20 1 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ನಾವು ಯಾವುದೇ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

**ಸಹಿ/-**

**2 ನೇ.ಹೆ.ಪ್ರ:ದ:ನ್ಯಾ:ದಂ.,ರವರು,**
**ಕಡೂರು.**